International Journal of Kannada Research
www.kannadajournal.com

ISSN: 2454–5813
IJKR 2023; 9(3): 161-163
© 2023 IJKR
www.kannadajournal.com
Received: 03-06-2023
Accepted: 10-07-2023

**ಸೋಮಶೇಖರ.ಟಿ.ಡಿ**
ಸಂಶೋಧನಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ, ಭಾರತ

**Corresponding Author:**
**ಸೋಮಶೇಖರ.ಟಿ.ಡಿ**
ಸಂಶೋಧನಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ, ಭಾರತ

# ನುಗ್ಗೇಹಳ್ಳಿ ಪ್ರಾದೇಶಿಕ ಚರಿತ್ರೆ ಮತ್ತು ಸಾಂಸ್ಕೃತಿಕ ಭಿನ್ನತೆ

**ಸೋಮಶೇಖರ.ಟಿ.ಡಿ**

**ಪೀಠಿಕೆ**

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿ ಎಂಬ ಹೋಬಳಿಯು ಭೌಗೋಳಿಕ ವಿಸ್ತೀರ್ಣದಲ್ಲಿ ವಿಶಾಲವಾಗಿದೆ. ಅಂತೆಯೇ ನುಗ್ಗೇಹಳ್ಳಿ ಹೋಬಳಿಯಷ್ಟೆ ಅಲ್ಲದೇ ಐತಿಹಾಸಿಕ ಚರಿತ್ರೆಗಳನ್ನು ಒಳಗೊಂಡಿದೆ. ಈ ನಾಡು ನುಡಿಗೆ ಅನ್ವಯಿಸುವ ನೆಲೆ ಮತ್ತು ಹಿನ್ನೆಲೆಯನ್ನು ಕಂಡಾಗ, ಇಲ್ಲಿ ವಿಶಿಷ್ಟವಾದ ಸಂಸ್ಕೃತಿಯನ್ನು ಒಳಗೊಡಿದೆ ಎಂದು ಕಂಡುಕೊಳ್ಳಬಹುದು. ನುಗ್ಗೇಹಳ್ಳಿಗೆ ಸಂಬಂಧಿಸಿದ ಹಲವಾರು ಗ್ರಾಮಗಳನ್ನು ಅವಲೋಕಿಸಿ, ಇಲ್ಲಿಯ ಸ್ಥಳಗಳ ಚರಿತ್ರೆ ಮತ್ತು ಅದರದ್ದೇ ಆದ ಸಂಸ್ಕೃತಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಸ್ಪಷ್ಟವಾಗಿ ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಸರಿಸುಮಾರು ಅನೇಕ ವರ್ಷಗಳಿಂದ ಆಳ್ವಿಕೆ ಮಾಡಿದಂತಹ ರಾಜರು ಮತ್ತು ಪಾಳೆಯಗಾರರು ನುಗುನಾಡಿನ ಚರಿತ್ರೆ ಮತ್ತು ತಮ್ಮದೇ ಆದ ಸಂಸ್ಕೃತಿಯನ್ನು ರೂಪಿಸುವಲ್ಲಿ ಹೆಚ್ಚು ಒತ್ತು ನೀಡಿದ್ದಾರೆ. ಅಂತೆಯೇ ರಾಜರ ವಂಶಕ್ಕೆ ಸಂಬಂಧಿಸಿದ ಚರಿತ್ರೆಯೇ ಈ ನಾಡಿಗೆ ಇತಿಹಾಸ ಇದೆಯೆಂದು ತಿಳಿಸುತ್ತದೆ.

ಅರ್ಥಾತ್ ರಾಜರು ಸರಿ ಸುಮಾರು ವರ್ಷಗಳಿಂದ ತಮ್ಮ ಕೀರ್ತಿ ಹೆಚ್ಚಿಸಿಕೊಳ್ಳುವ ಸಲುವಾಗಿ, ತಮ್ಮ ವಂಶದ ಚರಿತ್ರೆಗಳನ್ನು ಶಿಲ್ಪಗಳು, ಹಸ್ತಪ್ರತಿಗಳು ಹಾಗೂ ಗ್ರಂಥರೂಪದಲ್ಲಿ ಪ್ರಕಟಿಸಿರಬಹುದು. ಅಷ್ಟೇ ಅಲ್ಲದೆ ಮೇಲ್ವರ್ಗದ ಜನರು ರಾಜಾಶ್ರಯದಲ್ಲಿ ಇರುವುದರಿಂದ ರಾಜನೇ ಪ್ರತ್ಯೇಕ್ಷ ದೈವ ಎನ್ನುವ ಪರಿಕಲ್ಪನೆಯನ್ನು ಇನ್ನುಳಿದ ಸಾಮಾನ್ಯ ವರ್ಗಗಳಿಗೆ ಪ್ರಭಾವ ಬೀರುವಂತೆ ಪ್ರಚೋಧಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಭಾವಕ್ಕೆ ಒಳಗಾದ ಕೆಳ ವರ್ಗದವರು ಮೂಲಭೂತ ಸಂಸ್ಕೃತಿಯಲ್ಲಿರುವ ಅಥವಾ ಮರಣ ಹೊಂದಿದ ರಾಜನೇ ದೈವವೆಂದು ಆರಾಧಿಸುವ ಆಚರಣೆ ರೂಢಿಯಲ್ಲಿ ಬಂದಿದೆ. ಈ ಹಿನ್ನೆಲೆಯಲ್ಲಿ ಪ್ರಭುತ್ವ ಶಾಹಿಗಳು ನೀಡುವಂತಹ ಕಟ್ಟುಪಾಡಿಗೆ ಒಂದು ಸಂಸ್ಕೃತಿ ಎಂದು ಕಂಡುಕೊಳ್ಳಬಹುದು. ಆ ಹಿನ್ನೆಲೆಯಲ್ಲಿ ಒಳಗಾಗುವ ಸಾಮಾನ್ಯ ವರ್ಗಗಳು ಪ್ರಸ್ತುತ ಕಾಲಮಾನದಲ್ಲೂ ಹಿರಿಯರನ್ನು ಅಥವಾ ಮರಣ ಹೊಂದಿದ ರಾಜರನ್ನೇ ಕುಲದೈವವಾಗಿ ಆರಾಧಿಸುವುದನ್ನು ಕಾಣಬಹುದು.

ದೈವ ಪರಂಪರೆ ಸಂಸ್ಕೃತಿಯ ಭಾಗವಾಗಿದೆ. ಈ ನೆಲವನ್ನು ಆಳ್ವಿಕೆ ಮಾಡಿದ ರಾಜರು ಮತ್ತು ಸಾಮಾನ್ಯರು ತಮ್ಮ ನಡವಳಿಕೆಗೆ ಅನ್ವಯವಾಗುವಂತೆ ಒಂದು ನಿರ್ದಿಷ್ಟ ಕಟ್ಟುಪಾಡುಗಳನ್ನು ರೂಪಿಸಿ, ಅದನ್ನೇ ಪರಂಪರೆಯಿಂದ ರೂಢಿ ಮಾಡಿಕೊಂಡಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಭಾಗದಲ್ಲಿ ಧರ್ಮಗಳಿಗೆ ಅನುಗುಣವಾದ ವರ್ಗಗಳನ್ನು ಕಾಣಬಹುದು. ಹಾಗೆಯೇ ವರ್ಗಗಳಿಗೆ ಅನ್ವಯವಾಗುವಂತೆ ಸಂಸ್ಕೃತಿಯ ಪ್ರಸರಣವನ್ನು ಗಮನಿಸಬಹುದು. ನುಗ್ಗೇಹಳ್ಳಿಯ ಧಾರ್ಮಿಕ ಚರಿತ್ರೆಯನ್ನು ವಿಶಿಷ್ಟವಾಗಿ ಗುರುತಿಸಲಾಗಿದೆ. ರಾಜಕೀಯವಾಗಿ ಪ್ರಬಲವಾಗಿದ್ದ ರಾಜರು ಮತ್ತು ಪಾಳೆಯಗಾರರು ಮೇಲ್ವರ್ಗದವರ ಅನುಕೂಲಕ್ಕೆ ತಕ್ಕಂತೆ ಸಾಮಾನ್ಯರನ್ನು ಮೂಢನಂಬಿಕೆಗಳಿಂದ ಹೊರಬಾರದಂತೆ ನೋಡಿಕೊಳ್ಳುತ್ತಿದ್ದರು.

ರಾಜನೇ ದೇವರೆಂದು ನಂಬಿಸಿ ಒಲೈಸಿರುವ ಅನೇಕ ಗ್ರಾಮೀಣ ಕಥೆಗಳ ಹಿನ್ನೆಲೆಯನ್ನು ಈ ಪ್ರದೇಶದಲ್ಲಿ ನೋಡಬಹುದಾಗಿದೆ. ಉದಾಹಣೆಗೆ: ರಂಗನಾಥ, ಕಾಮನಾಯಕ ದೊಣ್ಣಪ್ಪ, ಸುಡುಗಾಡಿನ ಸಿದ್ಧರು, ಸ್ತ್ರೀಯರಲ್ಲಿ ಮಾರಮ್ಮ, ಮಾಸ್ತಿಯಮ್ಮ, ಹಟ್ಟಿ ಮಾರಮ್ಮ ಹೀಗೆ ಇನ್ನೂ ಹಲವಾರು ವೀರ ಪುರುಷರು ಹಾಗೂ ಸ್ತ್ರೀಯರನ್ನು ದೇವರನ್ನಾಗಿ ಪರಿವರ್ತನೆ ಮಾಡಿರುವುದನ್ನು ಕಾಣುತ್ತೇವೆ. ಮೇಲ್ವರ್ಗದ ದೇವರು ಮತ್ತು ಕಳವರ್ಗದ ದೇವರೆಂದು ಬೇರೆ ಬೇರೆಯಾಗಿ ಕಾಣುವ ಪದ್ಧತಿಯಿದೆ.

ಪುರೋಹಿತರು ಸೃಷ್ಟಿಸಿದ ದೇವರಿಗೆ ಶೂದ್ರರು ಹೆಚ್ಚಾಗಿ ಹೋಗುವುದನ್ನು ನೋಡಬಹುದು. ಆದರೆ ಶೂದ್ರ ವರ್ಗದ ದೇವರಿಗೆ ಪುರೋಹಿತರು ಕೇವಲ ಪೂಜಾರಿಯಾಗಿ ಬರುತ್ತಾರೆ ವಿನಃ ಭಕ್ತರಾಗಿ ಹೋಗುವುದಿಲ್ಲ. ಹಾಗೆಯೇ ರಾಜರ ಕಾಲ ಮತ್ತು ಆಧುನಿಕ ಕಾಲಕ್ಕೆ ಬಂದರೂ ಸಹ ಪ್ರಸ್ತುತ ವೈದಿಕರ ಪೂಜಾ ಕೈಂಕಾರ್ಯದಲ್ಲಿ ಪುರೋಹಿತರು ಮಾತ್ರ ಕಂಡಿದ್ದಾರೆ. ಅಷ್ಟೇ ಅಲ್ಲದೆ ಅವರು ಮಾಡುವ ಪೂಜಾ ವಿಧಾನವು ವೈದಿಕ ಸಂಸ್ಕೃತಿಯಲ್ಲಿರುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಅನ್ವಯಿಸುವಂತೆ ನುಗ್ಗೇಹಳ್ಳಿ ವ್ಯಾಪ್ತಿಯಲ್ಲಿ ವೈದಿಕ ಸಂಸ್ಕೃತಿ ಪಸರಿಸಿಕೊಂಡಿರುವುದು ಬಹಳ ಅಚ್ಚರಿ ಎನಿಸಿದರು, ಈ ಸ್ಥಳಗಳು ರಾಜಾಶ್ರಯ ಅಥವಾ ಪಾಳೆಯಗಾರರ ನಿಯಂತ್ರಣದಲ್ಲಿಯಿದ್ದುದರಿಂದ ಸೂಕ್ತ ಅಧ್ಯಯನಕ್ಕೆ ಉತ್ತರ ಕಂಡುಕೊಳ್ಳಲು ಸಾಧ್ಯವಾಗುತ್ತಿದೆ.

ವೈದಿಕ ಸಂಸ್ಕೃತಿಯೊಳಗೆ ಹುಟ್ಟಿರುವ ವೈಷ್ಣವ ಮತ್ತು ಅವೈದಿಕಧಾರೆಯಲ್ಲಿ ಕಾಣುವ ಶೈವ ಪರಂಪರೆಯೂ ಹೆಚ್ಚಾಗಿ ಜನ ಸಾಮಾನ್ಯ ಮೇಲೆ ಪ್ರಭಾವ ಬೀರಿದೆ. ವಿಷ್ಣುವನ್ನೇ ಪರಬ್ರಹ್ಮ ಸ್ವರೂಪವೆಂದು ತಿಳಿದು ಆರಾಧಿಸುವ ವೈಷ್ಣವರು ಒಂದು ಕಡೆಯಾದರೆ, ಶಿವನನ್ನೇ ಪರಬ್ರಹ್ಮ ಸ್ವರೂಪವೆಂದು ತಿಳಿದು ಆರಾಧಿಸುವವರು ಶೈವರು ಮತ್ತೊಂದು ಕಡೆ ನಿಲ್ಲುತ್ತಾರೆ. ಹೀಗೆ ಎರಡೂ ಪಂಥಗಳು ನುಗ್ಗೇಹಳ್ಳಿ ಪ್ರದೇಶದಲ್ಲಿ ಪ್ರಚಾರದಲ್ಲಿರುತ್ತವೆ. ಈ ಪಂಥಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ನೋಡುತ್ತೇವೆ. ಇವಲ್ಲದೆ ಜೈನ, ಬೌದ್ಧ, ಮುಸ್ಲಿಂ ಧರ್ಮಗಳ ಪ್ರಭಾವದಿಂದ ಮತಾಂತರಗಳು ನಡೆದಿವೆ. ಬಹುಶಃ ಆರ್ಯ ಸಂಸ್ಕೃತಿಯಿಂದ ದ್ರಾವಿಡ ಸಂಸ್ಕೃತಿಯು ತನ್ನ ಮೂಲ ನೆಲೆಯನ್ನು ಕಳೆದುಕೊಳ್ಳುತ್ತಾ ಬಂದಿತು. ಹೀಗಾಗಿಯೇ ಈ ಸ್ಥಳಗಳಲ್ಲಿ ನೆಲಮೂಲ ಸಂಸ್ಕೃತಿ ಇರುವುದನ್ನು ಕೆಲವು ಜನ ಸಾಮಾನ್ಯರ ಆಚರಣೆಗಳಿಂದ ತಿಳಿಯಬಹುದಾಗಿದೆ.

ಕರ್ನಾಟಕದ ಹಲವಾರು ರಾಜರು ಧಾರ್ಮಿಕ ಹಿನ್ನೆಲೆಯಲ್ಲಿ, ಹೆಚ್ಚು ಆಶ್ರಯ ನೀಡಿರುವುದು ವೈಷ್ಣವರು ಮತ್ತು ಶೈವರಿಗೆ ಎಂದು ತಿಳಿದುಕೊಳ್ಳಲಾಗಿದೆ. ಆದರೆ ಅವರಿಂದ ವಿಶಿಷ್ಟವಾದ ಆಚಾರ ಸಂಪ್ರದಾಯಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸಂಸ್ಕೃತೀಕರಣ ಆಗಿರುವುದನ್ನು ತಿಳಿಯಬಹುದು. ಇಂತಹ ನಿಟ್ಟಿನಲ್ಲಿ ನುಗ್ಗೇಹಳ್ಳಿಯ ಪ್ರಾದೇಶಿಕ ಸಂಸ್ಕೃತಿಯನ್ನು ವಿಭಿನ್ನವಾಗಿ ತಿಳಿದುಕೊಳ್ಳಬಹುದಾಗುತ್ತದೆ. ಅನೇಕ ವರ್ಷಗಳಿಂದೆ ರಾಜರು ಮತ್ತು ಪಾಳೆಯಗಾರರಿಂದ ಹುಟ್ಟಿಕೊಂಡ ಸಂಸ್ಕೃತಿಯು ಪ್ರಸ್ತುತ ಕಾಲಕ್ಕೂ ಮುಂದುವರಿದುಕೊಂಡು ಆರಾಧಿಸುವ ಹಂತಕ್ಕೂ ತಲುಪಿದೆ. ಅಷ್ಟೆ ಅಲ್ಲದೇ ಆಧುನಿಕ ಯುಗದಲ್ಲೂ ಸಹ ಅಂತಹ ಆರಾಧನೆಯನ್ನು ಒಪ್ಪಿ ಅಪ್ಪಿಕೊಂಡಿರುವುದನ್ನು ಕಾಣುತ್ತೇವೆ. ಇಂತಹವುಗಳನ್ನು ಗಮನಿಸಿದಾಗ; ರಾಜಾಶ್ರಯದಲ್ಲಿದ್ದ ವೈಷ್ಣವರು ಮತ್ತು ಶೈವರು ತಮ್ಮದೇ ಆದ ಪರಿಕಲ್ಪನೆಯನ್ನು, ನುಗ್ಗೇಹಳ್ಳಿ ನಾಡಿಗೆ ಚಿರಕಾಲ ಉಳಿಯುವಂತೆ ಯೋಜನೆ ಮಾಡಿರುವುದನ್ನು ಕಂಡುಕೊಳ್ಳಬಹುದು. ಇದೊಂದು ಯಜಮಾನ್ಯ ಪದ್ಧತಿಯ ಮುಂದುವರಿಕೆಯಾಗಿದೆ. ಅಂತೆಯೇ ನುಗ್ಗೇಹಳ್ಳಿಯ ಚರಿತ್ರೆ ಮತ್ತು ಸಾಂಸ್ಕೃತಿಕವಾಗಿ ಕಂಡುಕೊಳ್ಳದೆ ವೈದಿಕಧಾರೆಯ ಸಂಸ್ಕೃತಿಯಲ್ಲಿ ನುಗ್ಗೇಹಳ್ಳಿ ಒಳಪಡುತ್ತದೆ. ಹಾಗೆಯೇ ಇನ್ನಿತರ ಗ್ರಾಮಗಳೂ ವೈದಿಕ ಸಂಸ್ಕೃತಿಯನ್ನು ಆಚರಿಸುತ್ತಾ ದ್ರಾವಿಡ ಸಂಸ್ಕೃತಿಯು ಮರೆಯಾಗುತ್ತಾ ಹೋಗಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ನುಗ್ಗೇಹಳ್ಳಿಯಲ್ಲಿ ವೈಷ್ಣವ ಪಂಥದವರು ಆಚರಿಸುವ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವವನ್ನು ಎಲ್ಲಾ ವರ್ಗದವರು ಸೇರಿದ್ದು ಹಾಗೂ ಪ್ರಮುಖವಾಗಿ ಆರು ಗ್ರಾಮಗಳಾದ ನುಗ್ಗೇಹಳ್ಳಿ, ಸಮುದ್ರವಳ್ಳಿ, ಮುದ್ದನಹಳ್ಳಿ, ವಿರೂಪಾಕ್ಷಪುರ, ಹೂವಿನಹಳ್ಳಿ, ಬಸವನಪುರದಂತಹ ಅನೇಕ ಹಳ್ಳಿಗಳು ಸೇರಿ ಪರಂಪರೆಯಿಂದ ಈ ಜಾತ್ರಾ ರಥೋತ್ಸವವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಹೀಗೆ ರಥಗಳನ್ನು ಕಟ್ಟಿಕೊಂಡು ವಿಜೃಂಭಣೆಯಿಂದ ಜಾತ್ರೆ ಮಾಡುವುದನ್ನು ನೋಡಬಹುದಾಗಿದೆ. ಹಾಗೆಯೇ, ಸದಾಶಿವ ದೇವಾಲಯದ ದೇವರನ್ನು ವೈಷ್ಣವರು ಶೈವರನ್ನು ಅನುಸಂಧಾನಗೊಳಿಸಿ ಆಚರಿಸುವ ವಾಡಿಕೆಯನ್ನು ಸೂಕ್ಷ್ಮವಾಗಿ ಕಾಣುತ್ತೇವೆ. ಅಂತೆಯೇ ನುಗ್ಗೇಹಳ್ಳಿಯ ಮತ್ತೊಂದು ದೇವಾಲಯವನ್ನು ಅವಲೋಕಿಸಬಹುದು. ಅದೇ ಚಂದ್ರಮೌಳೇಶ್ವರ ದೇವಾಲಯವಾಗಿದೆ. ಈ ದೇವಾಲಯದಲ್ಲಿ ಅಸಂಖ್ಯಾತ ಭಕ್ತರು ಬಂದು ಆರಾಧಿಸುವುದನ್ನು ಕಾಣುತ್ತೇವೆ. ವಿಶೇಷ ದಿನಗಳಂದು ವೈದಿಕರ ಸಂಪ್ರದಾಯಿಕ ಹಬ್ಬ ಎಂದು ಆಚರಿಸುತ್ತಾರೆ. ವೈದಿಕರ ಪ್ರಭಾವ ಸಾಮಾನ್ಯರಿಗೂ ಬೀರಿರುವುದರಿಂದ ಇಲ್ಲಿಯ ದೇವಾಲಯಗಳಿಗೆ ಮೇಲ್ವರ್ಗದ ಜನಕ್ಕೆ ಪ್ರಧಾನ ಪೂಜೆಯಿರುತ್ತದೆ. ಹಾಗೂ ಸ್ಥಳೀಯ ಅಥವಾ ಇತರೆ ಕಡೆಗಳಿಂದ ಪೂಜೆಗೆಂದು ಕೆಳವರ್ಗದ ಜನರು ಬರುವುದನ್ನು ಕಾಣಲು ಸಾಧ್ಯವಾಗುತ್ತದೆ.

ನುಗ್ಗೇಹಳ್ಳಿಯ ಮತ್ತೊಂದು ವಿಶೇಷವೆಂದರೆ; ಗ್ರಾಮದೇವತೆಯ ಹಬ್ಬಗಳಾಗಿವೆ. ಈ ಹಬ್ಬಗಳು ಸ್ಥಳೀಯರಿಗೆ ಹೊಸ ಮೆರುಗನ್ನು ನೀಡುವ ಹಬ್ಬಗಳೆಂದೇ ಖ್ಯಾತಿ ಪಡೆದಿದೆ. ನುಗ್ಗೇಳ್ಳಮ್ಮ ಎಂದೇ ಪ್ರಸಿದ್ಧಿಯಾಗಿರುವ ಈ ಗ್ರಾಮದೇವತೆಯನ್ನು ಪರಂಪರೆಯಿಂದ ಬೆಸ್ತರು ಆರಾಧನೆ ಮಾಡಿಕೊಂಡು ಬರುತ್ತಿದ್ದಾರೆ. ಭಕ್ತರು ತಮಗೆ ಬೇಕಾದ ವರವನ್ನು ಪಡೆಯಲು ವಿಶೇಷ ಪ್ರಾರ್ಥನೆ ಮಾಡುತ್ತಾರೆ. ಅಂತೆಯೇ ಇದು ಬೆಸ್ತರ ಹಬ್ಬವೆಂದೇ ಪ್ರಸಿದ್ಧಿಯಾಗಿದೆ. ಹೀಗಾಗಿಯೇ ನುಗ್ಗೇಳ್ಳಮ್ಮ ದೇವತೆ ವಿಶೇಷತೆಯಿಂದ ಕೂಡಿದ ಗ್ರಾಮದೇವತೆಯಾಗಿದೆ.

ನುಗ್ಗೇಹಳ್ಳಿಯ ಮಧ್ಯಭಾಗದಲ್ಲಿ ಹೆಬ್ಬಾಗಿಲು ಇದೆ. ಹೆಬ್ಬಾಗಿಲನ್ನು ತೊಡಕಿನಕಲ್ಲು ಎಂದು ಕರೆಯುತ್ತಾರೆ. ಈ ಸ್ಥಳದ ಮಹಿಮೆ ಬಹಳ ವಿಶಿಷ್ಟವಾದದ್ದು, ಪ್ರತಿ ವರ್ಷ ಯುಗಾದಿ ಹಬ್ಬದ ದಿನ ವಿಶೇಷ ಪೂಜೆ ನಡೆಯುತ್ತದೆ. ತೊಡಕಿನ ಕಲ್ಲಿಗೆ ನೂರೊಂದು ನಿಂಬೆಹಣ್ಣು, ನೂರೊಂದು ವಿಳ್ಯೇದೆಲೆ, ನೂರೊಂದು ಬಿಂದಿಗೆಯ ನೀರು ಇವೆಲ್ಲವನ್ನು ದೈವಕ್ಕೆ ಸಲ್ಲಿಸುವ ಪ್ರತೀತಿ ಇದೆ. ಇಲ್ಲಿರುವ ಕಲ್ಲಿಗೆ ನೂರೊಂದು ಬಿಂದಿಗೆಯ ನೀರಿಯಿಂದ ಶುಚಿತ್ವ ಮಾಡಿ, ಹಾಲಿನಿಂದ ಅಭಿಷೇಕ–ಪಂಚಾಮೃತಗಳನ್ನು ಮಾಡುವ ವಾಡಿಕೆಯಿದೆ. ಹೀಗೆ ಕರ್ನಾಟಕದ ಯಾವ ಭಾಗದಲ್ಲೂ ಇಂತಹ ಆಚರಣೆಯ ವಾಡಿಕೆ ಕಂಡುಬರುವುದಿಲ್ಲ. ಇಲ್ಲಿಯ ಮತ್ತೊಂದು ವಿಶೇಷವೆಂದರೆ ಹದಿಮೂರು ದಿನಗಳ ಕಾಲ ರಥೋತ್ಸವ ಮತ್ತು ಜಾತ್ರೆಯು ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಅದ್ದೂರಿಯಾಗಿ ನಡೆಯುತ್ತದೆ. ಅಷ್ಟೇ ಅಲ್ಲದೆ ಸುಂಕಿನ ಮಾರಮ್ಮ ದೇವರನ್ನು ಉಪ್ಪಾರ ಕುಲದವರು ಪೂಜಿಸುತ್ತಾರೆ. ಸ್ಥಳೀಯ ಪೂಜೆಗೆ ಇತರೆ ಸಮುದಾಯದವರು ಕೂಡ ಭಾಗಿಯಾಗುತ್ತಾರೆ. ಇಲ್ಲಿಯ ಮತ್ತೊಂದು ವಿಶೇಷವೆಂದರೆ ತಿಂಗಳ ಮಾವನ ಮದುವೆ, ಕರಗ ಮಹೋತ್ಸವ ಅಥವಾ ಹೂವಿನ ಕರಗ ಮಾಡುವ ಸಂಪ್ರದಾಯವಿದೆ. ಈ ಆಚರಣೆಯನ್ನು ಮಳೆ ಬಾರದೆ ಇರುವ ಸಂದರ್ಭದಲ್ಲಿ ಮದುವೆ ಮಾಡುವ ರೀತಿಯಲ್ಲಿ ಆಚರಿಸುತ್ತಾರೆ.

ಮನೆ ಮಾರಮ್ಮ ಮತ್ತು ವೀರಭದ್ರೇಶ್ವರ ದೇವರನ್ನು ಪರಿಶಿಷ್ಟ ಜಾತಿಯ ಬಲಗೈ ಸಮುದಾಯದವರು ತಮ್ಮ ಕುಲದೇವರೆಂದು ಪೂಜಿಸುತ್ತಾರೆ. ಬಸವೇಶ್ವರ ದೇವಸ್ಥಾನ ಗ್ರಾಮದ ಮಧ್ಯ ಭಾಗದಲ್ಲಿ ಕಂಡುಬರುತ್ತದೆ. ಈ ದೇವರನ್ನು ಲಿಂಗಾಯಿತ ಸಮುದಾಯದವರು ಆರಾಧಿಸುತ್ತಾರೆ. ಹಾಗೆಯೇ ಚಕ್ರ ನಾರಾಯಣಸ್ವಾಮಿ ದೇವಸ್ಥಾನ, ತಿರುಮಲ ದೇವಸ್ಥಾನ, ಗಣಪತಿ ದೇವಸ್ಥಾನ, ಕಲ್ಯಾಣಿ ಆಂಜನೇಯಸ್ವಾಮಿ ದೇವಸ್ಥಾನ ಮುಂತಾದವು ಧಾರ್ಮಿಕವಾಗಿ, ಸಮುದಾಯದ ಸಾಂಕೇತಿಕ ದೇವರುಗಳನ್ನಾಗಿ ಮಾಡಿಕೊಂಡು ಆರಾಧಿಸುತ್ತಾರೆ. ಇವೆಲ್ಲವು ನುಗ್ಗೇಹಳ್ಳಿಯಲ್ಲಿ ಕಂಡುಬಂದರೆ, ಸುತ್ತ–

ಮುತ್ತಲಿನ ಗ್ರಾಮಗಳ ಪ್ರಾದೇಶಿಕ ಹಿನ್ನೆಲೆಯಲ್ಲಿ ಗಮನಿಸಿದಾಗ ಇನ್ನೂ ಅಗಾಧವಾದ ಪೂಜೆ, ಆರಾಧನೆ, ಪವಾಡಗಳು, ನಂಬಿಕೆಗಳು ಹಾಗೂ ಆಚರಣೆಗಳನ್ನು ಸಾಂಸ್ಕೃತಿಕವಾಗಿ ಕಾಣಬಹುದು.

ಪ್ರಾದೇಶಿಕ ಹಿನ್ನೆಲೆಯಲ್ಲಿ ಹಬ್ಬ ಮತ್ತು ಜಾತ್ರೆಗಳನ್ನು ಗಮನಿಸಿದಾಗ ತಿಂಗಳ ಮಾವನ ಮದುವೆ, ಕಠಾರಿ ಮದುವೆ, ತಗಡೂರು ಹಟ್ಟಿ ಮಾರಮ್ಮನ ಹಬ್ಬ, ಒಬಳಾಪುರದ ಮಾರಮ್ಮನ ಜಾತ್ರೆ, ಜಂಬೂರು ಕೋಟೆಮಾರಮ್ಮನ ಜಾತ್ರೆ, ನುಗ್ಗೇಳ್ಳಮ್ಮನ ಜಾತ್ರೆ, ಅಮರಗಿರಿ ರಂಗನಾಥಸ್ವಾಮಿಯ ರಥೋತ್ಸವ, ನಾಗರನವಿಲೆಯ ನಾಗಪೂಜೆ, ನೇರಳಕೆರೆ ಹೊಸೂರು ಮಾರಮ್ಮನ ಜಾತ್ರೆ, ಎಂ ಸಿದ್ದರಹಟ್ಟಿ ಸುಡುಗಾಡು ಸಿದ್ದರ ಹಬ್ಬ ಮುಂತಾದವನ್ನು ಧಾರ್ಮಿಕ ಆಚರಣೆಯಾಗಿ ನುಗ್ಗೇಹಳ್ಳಿಯ ವಿಶೇಷತೆಯನ್ನು ಗುರುತಿಸಬಹುದು. ಇಂತಹ ವಿಶೇಷತೆ ಹೊಂದಿರುವ ನುಗ್ಗೇಹಳ್ಳಿ ಹೋಬಳಿಯ ಬಗೆಗೆ ಇಲ್ಲಿಯವರೆಗೂ ಸಮಗ್ರವಾದ ಅಧ್ಯಯನ ನಡೆದಿರುವುದಿಲ್ಲ. ಹೀಗಾಗಿಯೇ ಸಾಂಸ್ಕೃತಿಕವಾಗಿ ನುಗ್ಗೇಹಳ್ಳಿ ಸ್ಥಳದ ಅಧ್ಯಯನಕ್ಕೆ ಕೈಗೆತ್ತಿಕೊಳ್ಳಬಹುದಾದ ಒಂದು ವಿಶೇಷ ಕ್ಷೇತ್ರವೆಂದು ಪರಿಗಣಿಸಿ ಸೂಕ್ತ ಅಧ್ಯಯನಕ್ಕೆ ಮುಂದಾಗಿದ್ದೇನೆ. ಅಷ್ಟೇಅಲ್ಲದೇ ಪ್ರಾದೇಶಿಕ ಸಾಹಿತಿಗಳು, ಸಾಧಕರು, ರಾಜಕೀಯ ಗಣ್ಯರು ಹಾಗೂ ಕ್ರೀಡಾಪಟುಗಳು ಮುಂತಾದವರ ಸಾಧನೆಗಳನ್ನು ಅವಲೋಕಿಸಿ, ಇಲ್ಲಿನ ಅರುಹು-ಕುರುಹುಗಳನ್ನು ಮನಗಂಡು ನುಗ್ಗೇಹಳ್ಳಿ ಒಂದು ವಿಭಿನ್ನ ಕ್ಷೇತ್ರವೆಂದು ತಿಳಿದುಕೊಳ್ಳಬಹುದು. ಈ ಪ್ರದೇಶ ಕೇವಲ ರಾಜರ ಚರಿತ್ರೆ ಮಾತ್ರವಲ್ಲದೆ ಇನ್ನಿತರ ವಿಚಾರಗಳಲ್ಲೂ ಬದಲಾವಣೆಯಾಗಿರುವ ಸಾಕಷ್ಟು ಉದಾಹರಣೆಗಳಿವೆ. ಇಲ್ಲಿನ ಕೆಲವು ಮೂಢನಂಬಿಕೆಗಳು ಸಂಬಂಧಿಕರನ್ನು ಒಟ್ಟುಗೂಡಿಸುವ ಆಚರಣೆ ಎಂದೇ ಭಾವಿಸುವ ಆಚರಣಾ ಲೋಕವಾಗಿರುವುದು ಇಲ್ಲಿನ ಜನಮಾನಸದಲ್ಲಿ ಅಳಿಯದೆ ಉಳಿದಿದೆ. ಒಟ್ಟಾರೆ ನುಗ್ಗೇಹಳ್ಳಿ ಹಾಸನ ಜಿಲ್ಲೆಯಲ್ಲಿ ಪ್ರವಾಸಿ ತಾಣವಾಗಿ ವಿಶೇಷ ಗರಿಮೆ ಹಿರಿಮೆಯನ್ನು ಹೊಂದಿದೆ ಎಂದರೆ ತಪ್ಪಾಗಲಾರದು.

## ಗ್ರಂಥ ಋಣ


1. ಸಾಂಸ್ಕೃತಿಕ ಅಧ್ಯಯನ – ರಹಮತ್ ತರೀಕೆರೆ, ಪ್ರಕಾಶಕರು, ಅಭಿನವ ಮಾರೇನಹಳ್ಳಿ, ವಿಜಯನಗರ, ಬೆಂಗಳೂರು – 2017
2. ನೆಲ ಸಂಸ್ಕೃತಿ – ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಕಾಶಕರು, ಸುಮುಖ ಪ್ರಕಾಶನ, ವಿದ್ಯಾರಣ್ಯನಗರ, ಮಾಗಡಿ ರಸ್ತೆ, ಬೆಂಗಳೂರು–2006
3. ಪಾಳೆಯಗಾರರ ಶಾಸನಗಳು – ಸಂಪುಟ–02, ಪ್ರಧಾನ ಸಂಪಾದಕರು: ಪ್ರೊ.ಕೆ.ಎನ್.ಗಂಗಾನಾಯಕ್, ಡಾ.ಪುಟ್ಟಸ್ವಾಮಿ, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – 570006, 2012
4. ಬಹು ಸಂಸ್ಕೃತಿ ಮತ್ತು ದೇಶಿ ಜಾತ್ರೆಗಳ ಮಹಾಸಮನ್ವಯ, ಡಾ.ಹೆಬ್ಬಾಲೆ ಕೆ. ನಾಗೇಶ, ಪ್ರಕಾಶಕರು: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ – 2022
5. ಜನಪದ ಕಾವಡಿ ಹಬ್ಬಗಳು ಸಾಂಸ್ಕೃತಿಕ ಅಧ್ಯಯನ, ಡಾ.ವೈ ಚಂದ್ರಬಾಬು ಮಳುಬಾಗಿಲು, ಪ್ರಕಾಶಕರು: ಅಂಜಲಿ ಪ್ರಕಾಶನ, ಮುಳಬಾಗಿಲು, ಕೋಲಾರ ಜಿಲ್ಲೆ – 2010
6. ಹಾಸನ ಜಿಲ್ಲೆಯ ಅಂಕಿ–ಅಂಶಗಳ ನೋಟ – 2020–21, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಹಾಸನ, ಕರ್ನಾಟಕ ಸರ್ಕಾರ – 2021–22
7. ಹಾಸನ ಜಿಲ್ಲೆಯ ಜನಪದ ಕಲಾವಿದರು – ಡಾ.ಹಂಪನಹಳ್ಳಿ ತಿಮ್ಮೇಗೌಡ, ಪ್ರಕಾಶಕರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ, ಬೆಂಗಳೂರು – 2008
8. ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಸಂಪಾದಕರು: ಡಾ.ಆರ್.ಗೋಪಾಲ್, ಪ್ರಕಾಶಕರು: ಪಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ವಸ್ತು ಪ್ರದರ್ಶನ ಆವರಣ, ಮೈಸೂರು – 2010
9. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪ್ರಕಾಶಕರು: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು – 2016
10. ಚನ್ನರಾಯಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನಾ– ಡಾ. ಚಂದ್ರೇಗೌಡ. ಎನ್, ಪ್ರಕಾಶಕರು, ಅರ್ಪಿತಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಎಲ್–38, 3ನೇ ಹಂತ. ಕುವೆಂಪುನಗರ, ಮೈಸೂರು–570023–2013.